# ಮುರುಘಾಮಠದಲ್ಲಿ ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ, ಜು. 5** - ಸಾಮರಸ್ಯ ಜೀವನದ ಸ್ವಾರಸ್ಯ. ಸ್ವಾರಸ್ಯದಲ್ಲಿ ಸಾಮರಸ್ಯ ಇದೆ. ಇದು ನೆಮ್ಮದಿ ಜೀವನದ ರಹಸ್ಯವಾಗಿದ್ದು, ಕೂಡಿಬಾಳುವ ಮನಸ್ಥಿತಿ ಹೊಂದಬೇಕು. ಜೀವನದಲ್ಲಿ ಅರ್ಥ ಮಾಡಿಕೊಳ್ಳುವುದು ಮುಖ್ಯ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ನಡೆದ ಮೂವತ್ತೊಂದನೇ ವರ್ಷದ ಏಳನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಇದು ಸಾಮರಸ್ಯದ ಸಂದರ್ಭ. ಹೃದಯ ಹೃದಯಗಳ ಬೆಸುಗೆ ಈ ಕಲ್ಯಾಣ ಮಹೋತ್ಸವದಲ್ಲಿ ನಡೆಯುತ್ತಿದೆ. ಜಾತಿ, ಧರ್ಮ ಮೀರಿದ್ದು ಸಾಮರಸ್ಯ. ಪ್ರಸ್ತುತ ಸಂದರ್ಭದಲ್ಲಿ ನಮ್ಮ ಆರೋಗ್ಯದ ಸುರಕ್ಷತೆ ನಮ್ಮ ಕೈಯಲ್ಲಿದೆ. ಪ್ರತಿಯೊಬ್ಬರು ಕೋವಿಡ್ ಲಸಿಕೆಯನ್ನು ಹಾಕಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದು ಅರಿವು ಮೂಡಿಸಿದರು.

ಮುಖ್ಯಅತಿಥಿ ಕೆ.ಎಸ್. ಹುಚ್ರಾಯಪ್ಪ ಮಾತನಾಡಿ, ಮಾನವೀಯ ಮೌಲ್ಯಗಳನ್ನು ಬಿತ್ತುವ ಶರಣರೆಂದರೆ ಮುರುಘಾ ಶರಣರು. ಅವರ ಜಾತ್ಯತೀತ ನಿಲುವುಗಳನ್ನು ನಾವು ಒಪ್ಪಿಕೊಳ್ಳಬೇಕಿದೆ. ಎಲ್ಲ ಜಾತಿ, ಜನಾಂಗ, ಧರ್ಮವನ್ನು ಸಮಾನವಾಗಿ ಕಾಣುವವರು. ಸಾಮೂಹಿಕ ಕಲ್ಯಾಣ ಮಹೋತ್ಸವದ ಮೂಲಕ ಅವರು ಇಂತಹ ಸಂದೇಶವನ್ನು ಕೊಡುತ್ತಿದ್ದಾರೆ. ಭಕ್ತರಾದ ನಾವುಗಳು ಶ್ರೀಮಠಕ್ಕೆ ದಾಸೋಹ ಮಾಡಬೇಕು ಎಂದು ಹೇಳಿದರು.

ಮತ್ತೋರ್ವ ಅತಿಥಿ ಡಾ. ಅಮ್ಜಾದ್ ಹುಸೇನ್ ಮಾತನಾಡಿ, ಭಾರತದಲ್ಲಿ ಬಡತನ ಬರುತ್ತಿರುವುದು ಮದುವೆ ಸಮಾರಂಭಗಳಿಂದ. ಮದುವೆ ತುಂಬ ದುಸ್ತರವಾಗಿದೆ. ಯಾವುದು ದೊಡ್ಡ ಸಮಾರಂಭ ಇದೆಯೋ ಅದರಲ್ಲಿ ಖರ್ಚು ಕಡಿಮೆ ಮಾಡಬೇಕು. ಇಂದಿನ ಮದುವೆಗಳು ಕುದುರೆ ವ್ಯಾಪಾರದಂತಾಗುತ್ತಿದೆ. ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಎಲ್ಲರೂ ಇಂತಹ ಸರಳ ವಿವಾಹ ಮಹೋತ್ಸವದಲ್ಲಿ ಭಾಗಿಯಾಗಬೇಕು. ಇದು ಪ್ರಪಂಚಕ್ಕೆ ದೊಡ್ಡ ಸಂದೇಶವಾಗುತ್ತದೆ. ಮುರುಘಾಮಠದ ಕಾರ್ಯಗಳು ಅತ್ಯಂತ ಶ್ಲಾಘನೀಯವಾದುದು. ಇಲ್ಲಿ ಧರ್ಮ ಮುಖ್ಯವಲ್ಲ, ಪ್ರೀತಿ ವಿಶ್ವಾಸದಿಂದ ಬದುಕಬೇಕು. ತವರುಮನೆ ಬಿಟ್ಟು ಗಂಡನ ಮನೆಗೆ ಬರುವ ಹೆಂಡತಿಯನ್ನು ಪ್ರೀತಿಯಿಂದ ನೋಡಿಕೊಳ್ಳಿ ಎಂದು ಹಿತವಚನ ಹೇಳಿದರು.

ಶಿಕಾರಿಪುರ ವಿರಕ್ತಮಠದ ಶ್ರೀ ಚೆನ್ನಬಸವ ಸ್ವಾಮಿಗಳು ಮಾತನಾಡಿದರು. ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಜಿಗಳು, ಪೈಲ್ವಾನ್ ತಿಪ್ಪೇಸ್ವಾಮಿ, ಬಸವರಾಜ ಕಟ್ಟಿ, ಎನ್. ತಿಪ್ಪಣ್ಣ ಮೊದಲಾದವರಿದ್ದರು. ಈ ಸಂದರ್ಭದಲ್ಲಿ ಭದ್ರೇಶ್ ಎನ್. (ಆದಿದ್ರಾವಿಡ) - ಪಲ್ಲವಿ ಎನ್. (ಲಿಂಗಾಯತ) ಅಂತರ್ಜಾತಿ ವಿವಾಹ ಸೇರಿದಂತೆ 7 ಜೋಡಿಗಳ ವಿವಾಹ ನೆರವೇರಿತು. ಉಮೇಶ್ ಪತ್ತಾರ್ ಮತ್ತು ಸಂಗಡಿಗರು ವಚನ ಪ್ರಾರ್ಥನೆ ಮಾಡಿದರು. ಎಂ.ವೀರಭದ್ರಪ್ಪ ಸ್ವಾಗತಿಸಿದರು. ಜ್ಞಾನಮೂರ್ತಿ ನಿರೂಪಿಸಿದರು.




ಮೂವತ್ತೊಂದನೇ ವರ್ಷದ ಏಳನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ


ಮೂವತ್ತೊಂದನೇ ವರ್ಷದ ಏಳನೇ ತಿಂಗಳ
ಸಾಮೂಹಿಕ ಕಲ್ಯಾಣ


ಶ್ರೀಗುರುಬಸವಲಿಂಗಾಯನಮಃ
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ,
ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.) ಚಿತ್ರದುರ್ಗ
ಇವರ ಸಹಯೋಗದಲ್ಲಿ
ದಿನಾಂಕ : 05-07-2021 ಸೋಮವಾರ
ಸ್ಥಳ : ಅನುಭವ ಮಂಟಪ


ಮೂವತ್ತೊಂದನೇ ವರ್ಷದ ಏಳನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ